<u>ಅಸಲು ದಾವಾ ಸಂಖ್ಯೆ:-**111/2014**</u> ಪಿ.ಡಬ್ಲ್ಯೂ:- **1**

ದಿನಾಂಕಃ **27-02-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:-1, 2 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದ:-</u>

ನಿಪಿ-22 ದಾಖಲೆಯನ್ನು ನನ್ನ ಅಣ್ಣ ಅಥವಾ ಯಾರು ಪಡೆದುಕೊಂಡಿದ್ದಾರೆ ಎಂದು ನನಗೆ ಗೊತಿಲ್ಲ. ನಾನು ಮನೆಯಲ್ಲಿ ದಾಖಲೆಗಳನ್ನು ಹುಡುಕುವ ಸಮಯದಲ್ಲಿ ಸಿಕ್ಕಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-22 ದಾಖಲೆ ನನಗೆ ಮನೆಯಲ್ಲಿ ಸಿಕ್ಕ ಸಮಯದಲ್ಲಿ ಲಿ ಎಂಬ ಅಕ್ಷರ ತಿದ್ದುಪಡಿಯಾಗಿತ್ತು. ನಿಪಿ-22 ದಾಖಲೆಯಲ್ಲಿ ಲಿ ಎಂಬ ಅಕ್ಷರವನ್ನು ಯಾರು ತಿದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-22 ದಾಖಲೆಯನ್ನು ನಾಡಕಚೇರಿಯಲ್ಲಿ ಯಾರು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರ್ ಆರ್ ಟಿ ನಂ.9/2012-13 ರ ಪ್ರಕಣದಲ್ಲಿ ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಯಾರು ಹಾಜರುಪಡಿಸಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಆರ್ ಆರ್ ಟಿ ಪ್ರಕರಣವನ್ನು ನಾನೇ ನಡೆಸಿರುತ್ತೇನೆ. ಆರ್ ಆರ್ ಟಿ ಪ್ರಕರಣದಲ್ಲಿಯೂ ಸಹ ನಿಪಿ-22 ರ ತಿದ್ದುಪಡಿ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೀರಿ ಎಂದರೆ ನನಗೆ ಗೊತ್ತಿಲ್ಲ. ನಿಪಿ-22 ದಾಖಲೆಯು ನನಗೆ ಈಗ್ಗೆ 2 ವರ್ಷಗಳ ಹಿಂದೆ ಸಿಕ್ಕಿರುತ್ತದೆ. ಈ ದಾವೆಯಲ್ಲಿ ಹಾಜರುಪಡಿಸಿರುವ ನಿಪಿ-22 ಮತ್ತು ಆರ್ ಆರ್ ಟಿ ಪ್ರಕರಣದಲ್ಲಿ ಹಾಜರುಪಡಿಸಿರುವ ನನ್ನ ತಂದೆಯ ಮರಣ ಪ್ರಮಾಣ ಪತ್ರ ಎರಡು ಬೇರೆ ಬೇರೆ ಎಂದರೆ ಸರಿ. ಸಾಕ್ಷಿಗೆ ನಿ ಎಂಬ ಅಕ್ಷರವನ್ನು ಲಿ ಎಂದು ತಿದ್ದುಪಡಿ ಮಾಡಿದರೆ ಈ ದಾವೆಯಲ್ಲಿ ಯಾರಿಗೆ ಅನುಕೂಲವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಮರಣ ಪ್ರಮಾಣ ಪತ್ರವನ್ನು ತೋರಿಸಿ ಸದರಿ ಮರಣ ಪ್ರಮಾಣ ಪತ್ರವನ್ನು ದಿಃ 17-09-2025 ರಂದು ನೀವು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಹೌದು ನಾನು ಪಡೆದುಕೊಂಡಿರುತ್ತೇನೆ ತದನಂತರ ಸದರಿ ಮರಣ ಪ್ರಮಾಣ ಪತ್ರವು ನನ್ನ ತಂದೆಗೆ ಸೇರಿದ್ದಲ್ಲ ಎಂದು ನನಗೆ

ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ದಿಃ 17-09-2025 ರ ಪರಮೇಶ್ವರಪ್ಪನ ಮರಣ ಪ್ರಮಾಣ ಪತ್ರದ ಮೂಲ ಪ್ರತಿ ನನ್ನ ಬಳಿ ಇರುತ್ತದೆ. ಸದರಿ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಹೊನ್ನಾಳಿ.**